

ಅಲ್ಪ ಮಿಗಿಲಾದ ಉತ್ತಮವಾದ ಬದುಕೊಂದು ಮಕ್ಕಳಿಗೆ ದೊರಕಲಿ ಎಂಬುದು. ಈ ನೇರ ಹಾದಿಗಳು, ಆಲೋಚನೆಗಳು ಎದುರಿಗಿರುವವರಿಗೆ ತಲುಪುವುದೇ ದುರ್ಭರ.

ಫೇಲಾದ ಮಗಳು ಇನ್ನು ಮನೆಯಲ್ಲೇ ಕುಳಿತರೆ ಹೇಗೆ ಎಂದು ಗೊತ್ತಿರುವವರನ್ನೆಲ್ಲಾ ವಿಚಾರಿಸಿ ದೂರದ ಊರಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಸೇರಿಸಿ, ಹಾಸ್ಟೆಲ್‌ಗೆ ಸೇರಿಸಿದಳು ತಾಯಿ. ಎಸ್ಸೆಸ್ಸೆಲ್ಸಿ ಓದುವಾಗಲೇ ಕೈಗೆ ಬಂದಿದ್ದ ಮೊಬೈಲ್‌ನಿಂದಾಗಿ ಓದಿಗೆ ತಿಲಾಂಜಲಿ ಇಡುವ ಜೊತೆಗೆ ಸೋಷಿಯಲ್ ಮೀಡಿಯಾದ ಕೈಗೆ ಬದುಕನ್ನು ಕೊಟ್ಟು ಕುಳಿತಾಗಿತ್ತು ವಾಣಿ.

ಇನ್‌ಸ್ಟಾದಲ್ಲಿ ಪರಿಚಿತನಾದ ನವೀನ, ಉತ್ತರ ಕರ್ನಾಟಕ ಭಾಗದ ಹಳ್ಳಿಯವನು. ಮೂರನೇ ತರಗತಿ ಓದಿ, ಓದು ತಲೆಗೆ ಹತ್ತದೆ ಊರಲ್ಲಿ ಯಾವ ಕೆಲಸವನ್ನು ಮಾಡಲಾಗದೇ ಬಂದು ಬೆಂಗಳೂರು ಸೇರಿದ್ದವನು. ಸಿಕ್ಕ ಕಡೆಗಳಲ್ಲಿ ಕೆಲಸ ಮಾಡುತ್ತಾ, ಕೆಲಸದವರು ಕೊಟ್ಟ ಜಾಗದಲ್ಲಿ ವಾಸ ಮಾಡುತ್ತಾ, ಹತ್ತು ವರ್ಷಗಳು ಬೆಂಗಳೂರಿನಲ್ಲಿ ಇದ್ದು, ಬೆಂಗಳೂರಿನವನಾಗಿ ಬಿಟ್ಟಿದ್ದ. ಬೇಕರಿ, ಹೋಟೆಲ್, ಅಂಗಡಿ ಎಲ್ಲೇ ಕೆಲಸ ಸಿಕ್ಕರೂ ಮಾಡುತ್ತಾ ವರ್ಷಕ್ಕೆರಡು ಬಾರಿ ಊರಿಗೆ ಹೋಗಿ ಬರುತ್ತಿದ್ದ. ನವೀನನಿಗೆ ತನ್ನವರು ಎಂದು ಇದ್ದದ್ದು ತಾಯಿ ಮತ್ತು ಇಬ್ಬರು ಅಣ್ಣಂದಿರು ಮಾತ್ರ. ಅಣ್ಣಂದಿರು ಮದುವೆ ಮಾಡಿಕೊಂಡು ನೆಮ್ಮದಿಯ ಜೀವನ ನಡೆಸುತ್ತಿದ್ದರು.

ಇನ್‌ಸ್ಟಾದಲ್ಲಿ ಪರಿಚಯವಾದ ವಾಣಿ ಮತ್ತು ನವೀನ ಮೆಸೇಜ್‌ನಲ್ಲಿಯೇ ಮಾತಾಡುತ್ತಾ ಮಾತಾಡುತ್ತಾ ಪರಸ್ಪರ ಮೊಬೈಲ್ ನಂಬರ್ ಪಡೆದುಕೊಂಡು ಚಾಟಿಂಗ್‌ನಲ್ಲಿ ತೊಡಗಿದ್ದರು. ಓದಿನಲ್ಲಿನ ನಿರಾಸಕ್ತಿ. ಬೇಡವೆಂದರೂ ಮನೆಯಿಂದ ದೂರ ಹಾಸ್ಟೆಲಿನ ವಾಸ. ಹದಿಹರೆಯದ ಚಡಪಡಿಕೆ. ಲಗಾಮಿಲ್ಲದ ಸೆಳೆತ. ಓದುವುದು ಅತ್ಯಂತ ಕಷ್ಟ ಎನ್ನಿಸಿ ನವೀನನೊಂದಿಗೆ ಆತನ ಹಳ್ಳಿಗೆ ಹೋಗಿ ಬದುಕು ಕಟ್ಟಿಕೊಳ್ಳುವ ಕನಸು ಕಂಡಳು ವಾಣಿ.

ನವೀನನು ಬೆಂಗಳೂರಿಗೆ ಬರುವಂತೆ ವಾಣಿಗೆ ಸೂಚಿಸಿದ್ದ. ಕಾಲೇಜಿಗೆ ಹೋಗುವುದಾಗಿ ಹೊರಟವಳು ಬೆಂಗಳೂರಿನ ಮೆಜೆಸ್ಟಿಕ್‌ಗೆ ಬಂದಿಳಿದಳು. ವಾಣಿ ಮತ್ತು ನವೀನನಿಗೆ ಎಲ್ಲಿಗೆ ಹೋಗಬೇಕೆಂದು ತಿಳಿಯದೇ ಬೆಂಗಳೂರು ರೈಲ್ವೇ ನಿಲ್ದಾಣದಲ್ಲೇ ರಾತ್ರಿ ಕಳೆದು, ಬೆಳಗಿನ ಟ್ರೈನ್‌ನಲ್ಲಿ ಮೈಸೂರಿಗೆ ಹೊರಟರು. ದಿನವಿಡೀ ಮೈಸೂರಿನ ಚಾಮುಂಡಿ ಬೆಟ್ಟ, ಅರಮನೆ ಹಾಗೂ ನಗರದಲ್ಲೆಲ್ಲಾ ಸುತ್ತಾಡಿದರು. ಸಾಯಂಕಾಲ ಪುನಃ ಬೆಂಗಳೂರಿಗೆ ಬಂದಿಳಿದಾಗ ಮುಂದೆ ಎತ್ತ ಹೋಗಬೇಕೆಂಬುದು ತಿಳಿಯದಂತಾಗಿತ್ತು.

ನವೀನ ಹೇಗೋ ಧೈರ್ಯ ತಂದುಕೊಂಡು ತನ್ನೂರಿಗೆ ಹೊರಡುವ ಬಗ್ಗೆ ನಿರ್ಧಾರ ಮಾಡಿದ. ರೈಲ್ವೆ ನಿಲ್ದಾಣದಿಂದ ಟಿಕೆಟ್ ಪಡೆದು ರೈಲು ಹತ್ತಿ ಕುಳಿತರು.

ಅತ್ತ ಉತ್ತರ ಕರ್ನಾಟಕದ ರೈಲಿನಲ್ಲಿ ನವೀನ–ವಾಣಿ ಊರಿಗೆ ತೆರಳುವಾಗ ಇತ್ತ ಪೊಲೀಸರು ವಾಣಿಗಾಗಿ ಹುಡುಕಾಟ ಪ್ರಾರಂಭಿಸಿದ್ದರು. ಹಾಸ್ಟೆಲಿನಿಂದ ಕಾಲೇಜಿಗೂ ಹೋಗದೆ, ಪುನಃ ಹಾಸ್ಟೆಲಿಗೂ ಬಾರದೇ ಇದ್ದಾಗ ಕಾಲೇಜಿನ ಪ್ರಿನ್ಸಿಪಾಲರು ವಾಣಿ ತಾಯಿಗೆ ಮಾಹಿತಿ ನೀಡಿ, ಪೊಲೀಸರಿಗೂ ಮಾಹಿತಿ ನೀಡಿದ್ದರು. ದೂರು ದಾಖಲಾಗಿತ್ತು.

ವಾಣಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದರಿಂದಾಗಿ ಸಿಡಿಆರ್ ಬರುವವರೆಗೆ ಯಾರೊಂದಿಗೆ ಹೆಚ್ಚಿಗೆ ಮಾತಾಡಿದ್ದಾಳೆ, ಅವಳು ಎಲ್ಲಿ ಹೋಗಿರಬಹುದೆಂಬುದರ ಬಗ್ಗೆ ಪೊಲೀಸರಿಗೆ ಮಾಹಿತಿ ದೊರಕದೆ, ಆಕೆಯನ್ನು ಹುಡುಕುವುದು ತಡವಾಗಿತ್ತು. ಸಿಡಿಆರ್ ದೊರೆತ ತಕ್ಷಣ ನವೀನನ ಬಗ್ಗೆ ಮಾಹಿತಿ ದೊರೆಯಿತು. ಲೊಕೇಷನ್ ಆತನ ಊರಿನಲ್ಲಿ ಬಂದಿದ್ದರಿಂದ ಅಲ್ಲಿರುವುದು ಗೊತ್ತಾಗಿ, ಪೊಲೀಸರು ವಾಣಿಯ ತಾಯಿಯನ್ನು ಕರೆದುಕೊಂಡು ನವೀನನ ಊರಿಗೆ ಹೋಗಿದ್ದರು.

ನವೀನನ ಅಣ್ಣನ ಮನೆಯಲ್ಲಿದ್ದ ವಾಣಿ ಅಂದು ಬೆಳಿಗ್ಗೆ ಸ್ನಾನ ಮುಗಿಸಿ ಸಿದ್ಧವಾಗಿ ಜಗಲಿಯ ಮೇಲೆ ಕುಳಿತಿದ್ದಳು. ಕೆಲಸದ ನಿಮಿತ್ತ ಹೊರಹೋಗಿದ್ದ ನವೀನ ಪೊಲೀಸರು ಬಂದಿರುವುದಾಗಿ ತಿಳಿದ ನಂತರ ಮನೆಗೆ ಹಿಂತಿರುಗಿ ಬಂದಿರಲಿಲ್ಲ. ಪೊಲೀಸರು ವಾಣಿಯನ್ನು ಮಾತ್ರ ಕರೆದುಕೊಂಡು ಠಾಣೆಗೆ ಬಂದಿದ್ದು, ಸಾಯಂಕಾಲವಾದ್ದರಿಂದ ಸಾಂತ್ವನ ಕೇಂದ್ರದಲ್ಲಿರಿಸಿದ್ದರು.

ಮರುದಿನ ಬೆಳಿಗ್ಗೆ ಪೋಕ್ಸೋ ಪ್ರಕರಣಗಳಲ್ಲಿ ಮಹಿಳಾ ಅಧಿಕಾರಿ ಹೇಳಿಕೆ ಮಾಡಬೇಕಾದ್ದರಿಂದ, ಹೇಳಿಕೆ ಮಾಡಲು ನನಗೆ ಬರಹೇಳಿದ್ದರು. ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಹೇಳಿಕೆ ಮಾಡುವಾಗ ಪೊಲೀಸ್ ಸಮವಸ್ತ್ರವಿಲ್ಲದೇ ಸಾಧಾರಣ ಉಡುಪಿನಲ್ಲಿ ಹೇಳಿಕೆ ಮಾಡಬೇಕಾದುದರಿಂದ ಮಫ್ತಿಯಲ್ಲಿ ಸಾಂತ್ವನ ಕೇಂದ್ರಕ್ಕೆ ತೆರಳಿ ವಾಣಿಯ ಹೇಳಿಕೆ ಪಡೆದೆ. ಕಳೆದ ಆರು ತಿಂಗಳಿಂದ ಇನ್‌ಸ್ಟಾದಲ್ಲಿ ಪರಿಚಿತವಾಗಿದ್ದು, ಓದಿನಲ್ಲಿ ಆಸಕ್ತಿ ಇಲ್ಲದ ಕಾರಣ ಆತನೊಂದಿಗೆ ಹೋಗಿದ್ದಾಗಿ ಹೇಳಿದಳು. ನವೀನನ ಅಣ್ಣನ ಮನೆಯಲ್ಲಿ ಇದ್ದಾಗ ಒಂದೇ ಕೊಠಡಿಯಲ್ಲಿ ಮಲಗಿದ್ದು, ಆತನೊಂದಿಗೆ ದೈಹಿಕ ಸಂಬಂಧ ಮಾಡಿರುವುದಾಗಿ ಹೇಳಿದಳು. ಹದಿನೆಂಟು ವರ್ಷ ತುಂಬಿರದ ವಾಣಿಯ ಒಪ್ಪಿಗೆಯಿಂದಲೇ ದೈಹಿಕ ಸಂಪರ್ಕವಾದರೂ ಕಾಯ್ದೆ ಪ್ರಕಾರ ಅದು ಅಪರಾಧ. ಆದ್ದರಿಂದ ಅಪಹರಣ ಪ್ರಕರಣ ಪೋಕ್ಸೋ ಕಾಯಿದೆಯ ಅಡಿಯ ಪ್ರಕರಣವಾಗಿ ಬದಲಾವಣೆ ಮಾಡಬೇಕಾಗಿರುವುದರಿಂದ ಹೇಳಿಕೆಯ ಪ್ರತಿಯನ್ನು ಎಸ್‌ಹೆಚ್‌ಒರಿಗೆ ಕೊಟ್ಟು ಮನೆಗೆ ಬಂದೆ. ಪ್ರಕರಣವನ್ನು ಪೋಕ್ಸೋಗೆ ಬದಲಾಯಿಸಿದ ಪಿಎಸ್‌ಐ ಎರಡೇ ದಿನದಲ್ಲಿ ನವೀನನನ್ನು ಪತ್ತೆ ಹಚ್ಚಿ ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಧೀಶರು ನವೀನನನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದರು.

ಠಾಣೆಗಳಲ್ಲಿ ದಾಖಲಾಗುವ ಹಲವು ಪೋಕ್ಸೋ ಪ್ರಕರಣಗಳಲ್ಲಿ ಒಂದೆಂಬಂತೆ ಇದು ದಾಖಲೆ ಸೇರಿತು. ವಾಣಿ ತನ್ನ ತಾಯಿಯ ಜೊತೆಗೆ ಬೆಂಗಳೂರಿಗೆ ಹೋದಳು.